**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 03-01-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿತರ ಆದಾಯದ ವಿವರವನ್ನು ಪರಿಶೀಲನೆ ನಡೆಸಿದೆನು. ನಂತರ ದಿನಾಂಕ 23-12-2013 ರಂದು ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಹಾಸನ ಇವರಿಗೆ ಆರೋಪಿತರ ಸಂಬಳಕ್ಕೆ ಸಂಬಂಧಿಸಿದ ಬರಾವರ್ಡ್ ಸ್ಟೇಟ್ಮೆಂಟನ್ನು ಪರಿಶೀಲಿಸಿ ವರದಿ ನೀಡುವಂತೆ ಪತ್ರ ಬರೆದೆನು. ಅದೇ ರೀತಿ ಸದರಿಯವರು ದಿಃ22-1-14ರಂದು ನೀಡಿದ ವರದಿಯನ್ನು ಈಗಾಗಲೇ ಗುರುತಿಸಿದ ನಿಪಿ-46ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-46(ಎ) ಎಂದು ಗುರುತಿಸಲಾಯಿತು. ಈ ದಾಖಲೆ ಪ್ರಕಾರ ಚೆಕ್ ಅವಧಿಯಲ್ಲಿ ಆರೋಪಿತರ ಆದಾಯ 22,29,155 ಇತ್ತು. ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ.

ನಂತರ ಆರೋಪಿತರ ಪತ್ನಿ ಶುಭಾರವರು ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕಂಪ್ಯೂಟರ್ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು ಅದಕ್ಕೆ ಸಂಬಂಧಪಟ್ಟ ಮಾಹಿತಿ ನೀಡುವಂತೆ ಕಿಯೋನಿಕ್ಸ್ ಪ್ರಾಜೆಕ್ಟ್ ವ್ಯವಸ್ಥಾಪಕರಾದ ಮೋಹನ್ ಕುಮಾರ್ ಗೌಡ ರವರಿಗೆ ದಿಃ14-8-14ರಂದು ಪತ್ರ ಬರೆದೆನು. ಅದರಂತೆ ಅವರು ದಿಃ23-9-14ರ ಪತ್ರದೊಂದಿಗೆ ಮಾಹಿತಿಯನ್ನು  ನಿಪಿ-92ರಂತೆ ನೀಡಿರುತ್ತಾರೆ.ಅದಕ್ಕೆ ಲಗತ್ತಾದ ದಾಖಲೆಗಳನ್ನು ನೋಡುತ್ತಿದ್ದು ಅದು ಒಟ್ಟು 3 ಹಾಳೆಗಳನ್ನೊಳಗೊಂಡಿದ್ದು ಒಟ್ಟಾಗಿ ನಿಪಿ-92(1) ಎಂದು ಗುರುತಿಸಲಾಯಿತು. ಈ ದಾಖಲೆಗಳಂತೆ ಅವರ ಆದಾಯ ಚೆಕ್ ಅವಧಿಯಲ್ಲಿ 1,35,000ರೂ ಆಗಿರುತ್ತದೆ. ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ.

ಹಿರಿಯ ಉಪನೋಂದಣಾಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲಾಗಿ ಶಂಕರಿಪುರಂ ಬಡಾವಣೆಯಲ್ಲಿ ಇದ್ದಂತಹ ಆರೋಪಿತರ ಪತ್ನಿ ಶುಭಾರವರ ಹೆಸರಿನಲ್ಲಿ ಇದ್ದಂತಹ ನಿವೇಶನ ಮತ್ತು ಮನೆಯನ್ನು ಓಂಪ್ರಕಾಶ್ ಮಾಲಿ ಎಂಬುವವರಿಗೆ 11ಲಕ್ಷಕ್ಕೆ ಕ್ರಯಕ್ಕೆ ನೀಡಿರುತ್ತಾರೆ ಎನ್ನುವುದು ಕಂಡುಬಂತು. ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ.

ಆರೋಪಿತರು ಬೀರನಹಳ್ಳಿ ಕೆರೆಯಲ್ಲಿ ಹೊಂದಿರುವ ಎಂ.ಐ.ಜಿ II 35/2ರ ಮನೆಯನ್ನು 2,75,000ರೂಪಾಯಿಗೆ ಭೋಗ್ಯಕ್ಕೆ ನೀಡಿದ್ದು ಅದನ್ನು ಅಸಾರವರ ಕೆನರಾ ಬ್ಯಾಂಕ ಖಾತೆ ನಂಬರ್ 0531101046253ಕ್ಕೆ ಚೆಕ್ ನಂಬರ್ 700563ರ ಮೂಲಕ ದಿನಾಂಕ 21-5-2013ರಂದು ಜಮಾ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆ ಈಗಾಗಲೇ ಗುರುತಿಸಿದ ನಿಪಿ-160 ಆಗಿರುತ್ತದೆ. ಈ ಬಗ್ಗೆ ನಿಪಿ-15 ರ ಪಂಚನಾಮೆಯಲ್ಲಿ ಕಾಣಿಸಿರುತ್ತೇನೆ. ಈ ಹಣವನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ.

ಅಸಾರವರ ಪತ್ನಿ ಶುಭಾರವರ ಹೆಸರಿನಲ್ಲಿರುವ ಉದಯಗಿರಿ ಬಡಾವಣೆಯ 2ನೇ ಕ್ರಾಸ್ ಅರಳಿಕಟ್ಟೆ ರಸ್ತೆಯಲ್ಲಿರುವ ಒಂದು ಆರ್ ಸಿ ಸಿ ಮನೆಯ ಮೊದಲನೇ ಮಹಜಡಿಯನು ಧನಂಜಯ ಬಿನ್ ವೀರಭದ್ರಪ್ಪ ಇವರಿಗೆ 5,25,000ರೂಪಾಯಿಗೆ ಭೋಗ್ಯಕ್ಕೆ ನೀಡಿರುತ್ತಾರೆ. ಸದರಿ ಹಣ ಆರೋಪಿತರ ಕೆನರಾ ಬ್ಯಾಂಕ ಖಾತೆ ನಂಬರ್ 0531101046253 ಖಾತೆಗೆ ದಿನಾಂಕ 28-1-13ರ ಕಾರ್ಪೊರೇಶನ್ ಬ್ಯಾಂಕ್ ಡಿಡಿ ನಂಬರ್ 44770ರಂತೆ 4,40,000ರೂಪಾಯಿ, ಇಂಡಿಯನ್ ಬ್ಯಾಂಕ್, ಹಾಸನ ಇದರ ಡಿಡಿ ನಂಬರ್ 732813 ದಿನಾಂಕ 31-313ರಂತೆ ರುಪಾಯಿ 60,000 ಒಟ್ಟು 5ಲಕ್ಷ ರೂಪಾಯಿ ಜಮಾ ಆಗಿರುತ್ತದೆ. ಉಳಿದ 25ಸಾವಿರ ರೂಪಾಯಿ ಹಣವನ್ನು ಭೋಗ್ಯದ ಕರಾರು ಪತ್ರದಲ್ಲಿ ನಗದಾಗಿ ನೀಡಿರುವುದು ಕಂಡುಬಂದಿರುತತದೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ನಿಪಿ-161 ಆಗಿರುತ್ತದೆ. ಇದನು ನಿಪಿ-15 ರಪಂಚನಾಮೆಯಲ್ಲಿ ಕಾಣಿಸಿರುತ್ತೇನೆ. ಸದರಿ 5ಲಕ್ಷ ರೂಪಾಯಿ ಹಣವನ್ನು ಆರೊಪಿತರ ಆದಾಯವಾಗಿ ಪರಿಗಣಿಸಿರುತ್ತೇನೆ.

ಆರೋಪಿತರ ಪತ್ನಿ ಶುಭಾರವರು ದಿವಾನ್ ಹೌಸಿಂಗ್ ಫೈನಾನ್ಸ್ ಕಾರ್ಪೊರೇಶನ್ ನಲ್ಲಿ ಪಡೆದ ಸಾಲದ ಬಗ್ಗೆ ಮಾಹಿತಿ ನೀಡುವಂತೆ ಸದರಿ ಫೈನಾನ್ಸ್ ಗೆ ದಿನಾಂಕ 16-11-13ರಂದು ಪತ್ರ ಬರೆದಿರುತ್ತೇನೆ. ಸದರಿಯವರು ನೀಡಿದ ಮಾಹಿತಿಯಲ್ಲಿ 11,72,027ರೂಪಾಯಿಗಳನ್ನು ಅವರು ಸಾಲ ಪಡೆದಿರುವುದಾಗಿ ಮತ್ತು ಅದರಲ್ಲಿ 92,027ರೂಗಳನ್ನು ಐಸಿಐಸಿಐ ಪ್ರುಡೆನ್ಷಿಯಲ್ ಇನ್ಸುರೆನ್ಸ್ ಪಾಲೀಸಿಗೆ ಜಮಾ ಮಾಡಿರುವುದಾಗಿ ತಿಳಿಸಿದರು. ಸದರಿ ಪಾಲಿಸಿ ಹಣವನ್ನು ಕಳೆದು ಉಳಿದ 10,80,000ರೂಪಾಯಿ ಹಣವನ್ನು ಆರೋಪಿತರ ಆದಾಯಕ್ಕೆ ತೆಗೆದುಕೊಂಡಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ-72 ರಿಂದ 74 ಆಗಿರುತ್ತದೆ. ನಿಪಿ-72 ಮತ್ತು 73ರಲ್ಲಿ ನನ್ನ ರುಜುಗಳಿದ್ದು ಅದನ್ನು ನಿಪಿ-72(ಬಿ) ಮತ್ತು 73(ಬಿ) ಎಂದು ಗುರುತಿಸಲಾಯಿತು.

ಆರೋಪಿತರು ಕುವೆಂಪುನಗರ ಬಡಾವಣೆಯಲ್ಲಿರುವ ಎಲ್ ಐ ಜಿ II ನಂಬರ್ 35/ಸಿ ಮನೆ ಕೊಳ್ಳಲು ಕೆನರಾ ಬ್ಯಾಂಕ್ ಹಾಸನ ಶಾಖೆಯಿಂದ ಪಡೆದಿರುವ ಸಾಲದ ಮಾಹಿತಿಯನ್ನು ಕರ್ನಾಟಕ ಗೃಹನಿರ್ಮಾಣ ಹೌಸಿಂಗ್ ಬೋರ್ಡ್ ಹಾಸನ ಇವರಿಂದ ಸ್ವೀಕರಿಸಿರುತ್ತೇನೆ. ಅದರಂತೆ 1,20,241ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತಾರೆ ಎಂದು ಕಂಡುಬಂದಿರುತ್ತದೆ. ಅದನ್ನು ಆರೋಪಿತರ ಅದಾಯಕ್ಕೆಪರಿಗಣಿಸಿರುತ್ತೇನೆ. ಇದಕ್ಕೆಸಂಬಂಧಿಸಿದ ದಾಖಲೆ ನಿಪಿ-21 ಆಗಿರುತ್ತದೆ.

ಆರೋಪಿತರು ಮತ್ತು ಅವರ ಕುಟುಂಬದವರು ಹೊಂದಿರು ಎಲ್ ಐ ಸಿ ಪಾಲಿಸಿಗಳ ಮೆಚುರಿಟಿಯಿಂದ ಬಂದಂತಹ ಹಣದ ವಿವರವನ್ನು ಎಲ್ ಐ ಸಿ ಮತ್ತು ಬಜಾಜ್ ಅಲಿಯಾನ್ಸ್ ಹಾಗೂ ರಿಲಯನ್ಸ್ ಇನ್ಸುರೆನ್ಸ್ ಕಂಪನಿಗಳಿಂದ ಸ್ವೀಕರಿಸಿರುತ್ತೇನೆ. ಅವುಗಳ ಒಟ್ಟು ಮೊತ್ತ 4,51,565ರೂಪಾಯಿಗಳು ಆಗಿದ್ದು ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ಮೊತ್ತವನ್ನು ಆರೋಪಿತರು ತನಿಖೆಗೆ ಸಲ್ಲಿಸಿದ ಅನುಸೂಚಿಯಲ್ಲಿ ಘೋಷಿಸಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ದಾಖಲೆ, ನಿಪಿ-34, 36 ಮತ್ತು 37 ಆಗಿರುತ್ತದೆ.

ಆರೋಪಿತರು ಮತ್ತು ಅವರ ಕುಟುಂಬದವರು ಹೊಂದಿರುವ ಬ್ಯಾಂಕ್ ಖಾತೆ ಅಸಲಿನ ಮೇಲೆ ಪಡೆದಿರುವ ಬಡ್ಡಿ ಹಣದ ಮಾಹಿತಿಯನ್ನು ಸಂಬಂಧಪಟ್ಟ ಬ್ಯಾಂಕಿನಿಂದ ಪಡೆದುಕೊಂಡಿದ್ದು ಅದರಂತೆ ಎಸ್ ಬಿ ಎಂ ಆಲೂರು, ಇವರು ರೂ.32,441, ಸಿಂಡಿಕೇಟ್ ಬ್ಯಾಂಕ್ ಹಾಸನ ಇವರು ರೂ.351, ಕೆನರಾ ಬ್ಯಾಂಕ ಹಾಸನ ಇವರು ರೂ.28,251, ಕಾವೇರಿ ಕಲ್ಪತರು ಗ್ರಾ.ಬ್ಯಾಂಕ್, ಹಾಸನ ಇವರು 1170/-, ಎಸ್ ಬಿ ಎಂ ಎಡಿಬಿ ಬ್ಯಾಂಕ್ ಖಾತೆ ಹಾಸನ ಇವರು ರೂ.44, ಕೆನರಾ ಬ್ಯಾಂಕ ಕುವೆಂಪುನಗರ ಹಾಸನ ಇವರು ರೂ.3498, ಕಾವೇರಿ ಕಲ್ಪತರು ಬ್ಯಾಂಕ ಹಾಸನ ರೂ.3261 ಎಂದು ಮಾಹಿತಿ ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳು ನಿಪಿ-19, 20, 21, 24, 26, 28, 29 ಆಗಿರುತ್ತದೆ.

ಮೇಲ್ಕಂಡಂತೆ ಆರೋಪಿತರ ಒಟ್ಟು ಆದಾಯ 59,59,977ರೂಪಾಯಿ ಆಗಿರುತ್ತದೆ.

ನಂತರ ಆರೋಪಿತರ ಕುಟುಂಬದ ಖರ್ಚನ್ನು ಪರಿಶೀಲನೆ ಮಾಡಿರುತ್ತೇನೆ.

ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇದರ ಸಾಂಖ್ಯಿಕ ವಿಭಾಗದ ಡೆಪ್ಯುಟಿ ಡೈರೆಕ್ಟರ್ ರವರಿಂದ ಆರೋಪಿತರ ಕುಟುಂಬದ ಚೆಕ್ ಅವಧಿಯ ನಿರ್ವಹಣಾ ವೆಚ್ಚದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ಅದರಂತೆ ಅವರ ಕೌಟುಂಬಿಕ ವೆಚ್ಚ 7,40,451ರುಾಪಾಯಿ ಆಗಿರುತ್ತದೆ. ಈ ಹಣವನ್ನು ಆರೊಪಿತರ ಕೌಟುಂಬಿಕ ಖರ್ಚಿನ ಬಾಬ್ತು ಎಂದು ಪರಿಗಣಿಸಿರುತ್ತೇನೆ.

ಆರೋಪಿತರ ಮತ್ತು ಅವರ ಕುಟುಂಬದವರು ಧಾರ್ಮಿಕ ಕಾರ್ಯಗಳಿಗೆ ಮಾಡಿರುವ ವೆಚ್ಚ ರೂ.18,950 ಎಂದು ಆರೋಪಿತರು ಸಲ್ಲಿಸಿದ ಅನುಸೂಚಿ -18ರಲ್ಲಿ ಘೋಷಿಸಿಕೊಂಡದ್ದನ್ನು ಅವರ ಕೌಟುಂಬಿಕ ಖರ್ಚಿನ ಬಾಬ್ತು ಎಂದು ಪರಿಗಣಿಸಿರುತ್ತೇನೆ.

ಆರೋಪಿತರು ಸಲ್ಲಿಸಿದ ಅನುಸೂಚಿ 19ರಲ್ಲಿ ತಾನು ಆಲೂರಿನಲ್ಲಿ ಬಾಡಿಗೆ ಬಾಬ್ತು 8,280ರೂಪಾಯಿ ಮತ್ತು ಕೇಬಲ್ ಬಾಬ್ತು 500ರೂಪಾಯಿ, ಹಾಗೂ ಬೋರ್ವೆಲ್ ಖರ್ಚು 25,000ರೂಪಾಯಿ ಒಟ್ಟು 33780ರೂಪಾಯಿ ಖರ್ಚು ಮಾಡಿರುವುದಾಗಿ ತೋರಿಸಿದ್ದನ್ನು ಅವರ ಖರ್ಚಿನ ವೆಚ್ಚಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಮತ್ತು ಅವರ ಹೆಂಡತಿ ಶುಭಾರವರ ಹೆಸರಿನಲ್ಲಿ ಖರೀದಿಸಿದ ಸ್ವತ್ತುಗಳ ನೋಂದಣಿಗೆ ಸಂಬಂಧಿಸಿದಂತೆ ಪಾವತಿಸಿದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದ ಮಾಹಿತಿಯನ್ನು ಹಾಸನದ ನೋಂದಣಾಧಿಕಾರಿಗಳಿಂದ ಸ್ವೀಕರಿಸಿರುತ್ತೇನೆ. ಆರೋಪಿತರ ಪತ್ನಿ ಶುಭಾರವರು ನಗರ ಸಭಾ ವಾರ್ಡ್ ನಂಬರ್ 2 ರ ಖಾತೆ ಸಂಖ್ಯೆ523ರಲ್ಲಿ ಖರೀದಿಸಿದ ನಿವೇಶನ ಮತ್ತು ಮನೆಗೆ ಸಂಬಂಧಿಸಿದಂತೆ ನೋಂದಣಿ ಶುಲ್ಕ 1,00820ರೂಪಾಯಿ ಮತ್ತು ಲಾವಣ್ಯ ರವರು ನೀಡಿರುವ ಸಮ್ಮತಿ ಪತ್ರದ ಶುಲ್ಕ 380ರೂಪಾಯಿ ಒಟ್ಟು 1,01,200ರೂಪಾಯಿ ಎಂದು ಕಂಡುಬಂದಿರುತ್ತದೆ.

ಅದನ್ನು ಆರೋಪಿತರ ಖರ್ಚಿನ ಬಾಬ್ತು ಎಂದು ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆಗಳು ನಿಪಿ-18 ಮತ್ತು 146 ಆಗಿರುತ್ತದೆ.

ಹಾಸನ ನಗರದ ಬೀರನಹಳ್ಳಿ ಕೆರೆಯಲ್ಲಿರುವ ಆರೊಪಿತರಿಗೆ ಸೇರಿದ ಎಲ್ ಐ ಜಿ ಮನೆಗೆ ಸಂಬಂಧಿಸಿದಂತೆ ಪಾವತಿಸಿದ ನೋಂದಣಿ ಮತ್ತು ಮುದ್ರಾಂಕ ಶುಲ್ಕ 28,410ರೂಪಾಯಿ ಎಂದು ಉಪನೊಂದಣಾಧಿಕಾರಗಳು ನೀಡಿದ ಮಾಹಿತಿಯಂತೆ ಕಂಡುಬಂದಿರುತ್ತದೆ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**